ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ:177:ನಿಯೋಜನೆ:2017-18:ವ&ನಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:05-01-2018

## ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ಸೇವಾ ವಿವರಗಳನ್ನು ಮತ್ತು ಕಾರ್ಯಭಾರ ಪಟ್ಟಿಯನ್ನು ಇಎಂಐಎಸ್(EMIS) ನಲ್ಲಿ ದಾಖಲಿಸುವ ಬಗ್ಗೆ.

*****

ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಸೇವಾ ವಿವರಗಳು ಮತ್ತು ಸರ್ಕಾರಿ ಪದವಿ ಕಾಲೇಜುಗಳಲ್ಲಿ ವಿವಿಧ ವಿಷಯಗಳಲ್ಲಿರುವ ಒಟ್ಟು ಕಾರ್ಯಭಾರದ ವಿವರವನ್ನು ಇಎಂಐಎಸ್(EMIS) ತಂತ್ರಾಂಶದ ಮೂಲಕ ಎಲ್ಲಾ ಕಾಲೇಜುಗಳಲ್ಲಿ ಆಯಾ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ದಾಖಲು ಮಾಡಬೇಕಾಗಿರುತ್ತದೆ. ಆದರೆ ಹಲವಾರು ಕಾಲೇಜುಗಳಲ್ಲಿ ಅಪೂರ್ಣ ಮಾಹಿತಿಗಳನ್ನು <u>ಇಎಂಐಎಸ್(EMIS)</u> ತಂತ್ರಾಂಶದಲ್ಲಿ ದಾಖಲು ಮಾಡುತ್ತಿರುವುದರಿಂದ ಬೋಧಕ/ಬೋಧಕೇತರ ನೌಕರರ ವರ್ಗಾವಣೆ/ನಿಯೋಜನೆ ಪ್ರಕ್ರಿಯೆ ಕೈಗೊಳ್ಳಲು ತೊಂದರೆಯಾಗುತ್ತಿದೆ. ಆದ್ದರಿಂದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು/ಪ್ರಭಾರಿ ಪ್ರಾಂಶುಪಾಲರು ತಮ್ಮ ತಮ್ಮ ಕಾಲೇಜುಗಳಲ್ಲಿ ಕರ್ತವ್ಯನಿರ್ವಹಿಸುತ್ತಿರುವವರ (Lien ಹೊಂದಿರುವ ಅಂದರೆ ತಮ್ಮ ಕಾಲೇಜಿನಲ್ಲಿ ವೇತನವನ್ನು ಪಡೆಯುತ್ತಿರುವ ಖಾಯಂ ಪ್ರಾಂಶುಪಾಲರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು) ಸೇವಾ ವಿವರಗಳನ್ನು ಹಾಗೂ ವಿಷಯವಾರು ಕಾರ್ಯಭಾರದ ವಿವರ ಮತ್ತು ಅತಿಥಿ ಉಪನ್ಯಾಸಕರ ವಿವರಗಳನ್ನು ಯಾವುದೇ ಕಾರಣ ನೀಡದೆ ಕಡ್ಡಾಯವಾಗಿ <u>ದಿನಾಂಕ:09-01-2018ರ ಸಂಜೆ 5.30ರೊಳಗಾಗಿ ಇಎಂಐಎಸ್(EMIS)</u> ತಂತ್ರಾಂಶದಲ್ಲಿ <u>ನಿಖರವಾದ ಮಾಹಿತಿಯನ್ನು</u> ಅಪ್‌ಲೋಡ್ ಮಾಡಲು ಸೂಚಿಸಲಾಗಿದೆ.

<u>ಇಎಂಐಎಸ್(EMIS)</u> ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲಾದ ವಿಷಯವಾರು ಕಾರ್ಯಭಾರದ ಮಾಹಿತಿಯನ್ನು ಪರಿಗಣಿಸಿ ನಿಯೋಜನೆ ಪ್ರಕ್ರಿಯೆಯನ್ನು ಕೈಗೊಳ್ಳುವುದರಿಂದ **<u>ಪ್ರಾಂಶುಪಾಲರು/ ಪ್ರಭಾರಿ ಪ್ರಾಂಶುಪಾಲರು ತಮ್ಮ ವೈಯಕ್ತಿಕ ಗಮನಹರಿಸಿ ನಿಖರ ಹಾಗೂ ಪೂರ್ಣ ಮಾಹಿತಿಯನ್ನು ನಿಗದಿತ ಅವಧಿಯೊಳಗೆ ಅಪ್‌ಲೋಡ್ ಮಾಡುವಂತೆ ಮತ್ತೊಮ್ಮೆ ಸೂಚಿಸಲಾಗಿದೆ. ಅಪೂರ್ಣ ಮಾಹಿತಿಯಿಂದಾಗಿ ಉಂಟಾಗುವ ಯಾವುದೇ ಆಡಳಿತಾತ್ಮಕ/ಕಾನೂನು ತೊಡಕುಗಳಿಗೆ/ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಪಟ್ಟ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.</u>**

Sulpay
ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

ಇವರಿಗೆ,

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ತುರ್ತು ಕ್ರಮಕ್ಕಾಗಿ.
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ-ತಮ್ಮ ಕಛೇರಿ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು/ಪ್ರಭಾರಿ ಪ್ರಾಂಶುಪಾಲರು ಮೇಲ್ಕಂಡ ಮಾಹಿತಿಯನ್ನು ಇಎಂಐಎಸ್(EMIS) ತಂತ್ರಾಂಶಕ್ಕೆ ಅಪ್‌ಲೋಡ್ ಮಾಡುವ ಬಗ್ಗೆ ಖುದ್ದು ನಿಗಾ ವಹಿಸುವುದು.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ವೆಬ್‌ಸೈಟ್ ನಲ್ಲಿ ಅಳವಡಿಸಲು ಈ ಸಂಬಂಧ ತಾಂತ್ರಿಕ ನ್ಯೂನತೆಗಳಿದ್ದಲ್ಲಿ ತುರ್ತಾಗಿ ಸರಿಪಡಿಸುವುದು.
4. ಕಛೇರಿ ಪ್ರತಿ.